26. ಚಿನ್ನಂಗಿಹಳ್ಳಿ	Chinnangihalli
27. ದೊಡ್ಡಬೀಕನ ಹಳ್ಳಿ.	Doddabeekanahalli
28. ಸತ್ತಿಗರಹಳ್ಳಿ	Sathigarahalli
29. ಮಾರನಾಯಕನಹಳ್ಳಿ	Maranayakanahalli
30. ಅಂಕಪುರ	Ankapura
31. ದ್ಯಾವರನಹಳ್ಳಿ	Dyavaranahalli
32. ದೇವಿಹಳ್ಳಿ	Devihalli
33. ಬೀಕನಹಳ್ಳಿ	Beekanahalli
34. ಪದುಮನಹಳ್ಳಿ	Padumanahalli
35. ಆಂಜುನೇಯಪುರ	Anjaneyapura
36. ಶೆಟ್ಟಿಹಳ್ಳಿ	Shettihalli
37. ತಮ್ಮಗೊಂಡನಹಳ್ಳಿ	Thammagondanahalli
38. ಮುತ್ತನಹಳ್ಳಿ	Muthanahalli
39. ಮುದ್ದನಹಳ್ಳಿ	Muddanahalli
40. ರಾವುತನಹಳ್ಳಿ	Rauthanahalli
41. ಊರುಮುಂದಿನಹಳ್ಳಿ	Uramundinahalli
42. ಚಂಗರವಳ್ಳಿ	Changaravalli

ಯಗಚಿ ಅಣೆಕಟ್ಟು ಕೆಲಸ

2968 - ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಯಗಚಿ ಅಣೆಕಟ್ಟಿನ ಕಾರ್ಯವು ಎಂದಿನಿಂದ ಪ್ರಾರಂಭವಾಯಿತು. ಈ ಯೋಜನೆಯ ಅಂದಾಜು ಎಷ್ಟು?

ಆ) ಯಗಚಿ ಅಣೆಕಟ್ಟು ನಿರ್ಮಾಣಕ್ಕೆ ಕಳೆದ ಮೂರು ವರ್ಷಗಳಿಂದ ವರ್ಷಒಂದಕ್ಕೆ ಖರ್ಚು ಆದ ಹಣವೆಷ್ಟು (ವಿವರಗಳನ್ನು ಒದಗಿಸುವುದು)

ಇ) ಯಗಚಿ ಅಣೆಯ ಕಾರ್ಯವನ್ನು ಟೆಂಡರ್ ನಿಯಮಗಳ ವಿರುದ್ಧವಾಗಿ ಪ್ರಾರಂಭಿಸಲು ಕಾರಣವೇನು?

ಶ್ರೀ ಮಲ್ಲಾರಿಗೌಡ ಎಸ್ ಪಾಟೀಲ (ಭಾರಿ ಮತ್ತು ಮಧ್ಯಮನೀರಾವರಿ ಸಚಿವರು):

ಅ) ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಯಗಚಿ ಅಣೆಕಟ್ಟಿನ ಕಾರ್ಯವು 1987ನೇ ಸಾಲಿನಲ್ಲಿ ಪ್ರಾರಂಭವಾಯಿತು. ಸರ್ಕಾರದ ಮಂಜೂರಾತಿ ಪಡೆದ ಯಗಚಿ ಜಲಾಶಯದ 3538 ಲಕ್ಷ ರೂ.ಗಳ ಅಂದಾಜು ಪಟ್ಟಿಯಲ್ಲಿ ಯಗಚಿ ಅಣೆಕಟ್ಟು ಮತ್ತು ಅದಕ್ಕೆ ಸಂಬಂಧಪಟ್ಟ ಕೆಲಸಗಳಿಗೆ 648.00 ಲಕ್ಷರೂ.ಗಳನ್ನು ನಿಯೋಜಿಸಲಾಗಿದೆ.

ಆ) ಯಗಚಿ ಅಣೆಕಟ್ಟು ನಿರ್ಮಾಣಕ್ಕೆ ಕಳೆದ ಮೂರು ವರ್ಷಗಳಿಂದ ವರ್ಷ ಒಂದಕ್ಕೆ ಖರ್ಚಾದ ಹಣದ ವಿವರಗಳು ಈ ಕೆಳಕಂಡಂತಿವೆ.

ವರ್ಷ	ಖರ್ಚು (ಲಕ್ಷ ರೂ.ಗಳಲ್ಲಿ)
1980-89	48-36
1989-90	101-82
1990-91	26.41

ಇ) ಯಗಚಿ ಅಣೆಕಟ್ಟು ಕಾರ್ಯವನ್ನು ಟೆಂಡರ್ ನಿಯಮಗಳ ಅನುಸಾರವಾಗಿ ಪ್ರಾರಂಭಿಸಲಾಗಿದೆ.

ಗ್ರಾಮೀಣ ಪ್ರದೇಶದಲ್ಲಿ ನೀರಿಗಾಗಿ ಕೊಳವೆ ಬಾವಿಗಳು.

ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) - 2964 : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ರಾಜ್ಯದಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಕಳೆದ ಮೂರು ವರ್ಷಗಳಿಂದ ಕುಡಿಯುವ ನೀರಿಗಾಗಿ ಕೊರೆದ ಕೊಳವೆ ಬಾವಿಗಳೆಷ್ಟು ? ಅವುಗಳಲ್ಲಿ ವಿಫಲವಾದ ಕೊಳವೆಬಾವಿಗಳೆಷ್ಟು ?

ಆ) ವಿಫಲವಾದ ಕೊಳವೆ ಬಾವಿಗಳಿಗೆ ಖರ್ಚಾದ ಹಣವೆಷ್ಟು ?

ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಕೊಳವೆಬಾವಿ ತೋಡಲಾಗಿದೆ ಹಾಗೂ ಎಷ್ಟು ವಿಫಲವಾಗಿವೆ.

ಶ್ರೀ ಕೆ.ಹೆಚ್.ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ)

ಇಸವಿ	ಕೊರೆದ ಬಾವಿಗಳ ಸಂಖ್ಯೆ	ವಿಫಲವಾದ ಕೊಳವೆ ಬಾವಿಗಳ ಸಂಖ್ಯೆ
1988-89	5587	290
1989-90	4375	366
1990-91	3699	414
ಒಟ್ಟು	**13,661**	**1070**

ಆ) ಸುಮಾರು 107.00 ಲಕ್ಷ ರೂ.ಗಳು

ಇ)

ಇಸವಿ	ಕೊರೆದ ಬಾವಿಗಳ ಸಂಖ್ಯೆ	ವಿಫಲವಾದ ಬಾವಿಗಳ ಸಂಖ್ಯೆ
1988-89	1196	5
1989-90	1211	114
1990-91	105	17